# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 21 ಹೆಬ್ಬಾಳ, ಬೆಂಗಳೂರು.**

**ಸಂಖ್ಯೆ: ಸ.ಅ/ವಾ-21/ಪಿ.ಆರ್/೭೦ /2021-22** **ದಿನಾಂಕ:07-03-2022**

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-22-02-2022 ರಂದು ಬೆಳಿಗ್ಗೆ 11:00 ಘಂಟೆಗೆ ವಾರ್ಡ್ ನಂ:21 ಹೆಬ್ಬಾಳ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

## ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ಗೋಪಾಲ್ ನಾಯಕ್, ಮುಖ್ಯ ಅಭಿಯಂತರರು, ದಾಸರಹಳ್ಳಿ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | ಹಾಜರಿದ್ದರು |
| 2 | ಶ್ರೀ ಮುಕೇಶ್ ಎಸ್ ಬಿರಾದಾರ್, ಸಹಾಯಕ ಅಭೀಯಂತರರು | ಸದಸ್ಯ ಕಾರ್ಯದರ್ಶಿ ವಾರ್ಡ್ ನಂ: 21 ಹೆಬ್ಬಾಳ | ಹಾಜರಿದ್ದರು |
| 3 | ಶ್ರೀ ಕನಕರಾಜ್, ಸಹಾಯಕ ಅಭೀಯಂತರರು | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು |
| 4 | ಶ್ರೀ ಆನಂದ್ ಕಿರಿಯ ಅಭಿಯಂತರರು | ವಿಧ್ಯುತ್ ವಿಭಾಗ, ಬಿಬಿಎಂಪಿ | ಹಾಜರಿದ್ದರು |
| 5 | ಶ್ರೀ ಆರ್.ಎಸ್ ಮಂಜೂನಾಥ | ಕಂದಾಯ ಪರಿವೀಕ್ಷಕರು | ಹಾಜರಿದ್ದರು |
| 6 | ಶ್ರೀ ರಾಮಣ್ಣ | ಕಂದಾಯ ವಸೂಲಿಗಾರರು | ಹಾಜರಿದ್ದರು |
| 7 | ಶ್ರೀ ಉಷಾ ರಾಣಿ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 8 | ಶ್ರೀ ವಿವೇಕ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಡ್ ನಂ: 21 ಹೆಬ್ಬಾಳ | ಹಾಜರಿದ್ದರು |
| 9 | ಶ್ರೀ ವೀರಶೇಖರ ಸ್ವಾಮಿ, | ಕಾರ್ಯದಶೀಫಲು ಆನಂದನಗರ ಕ್ಷೇಮಾಭಿವೃದ್ದಿ ಸಂಘ (ರಿ) | ಹಾಜರಿದ್ದರು |
| 10 | ಶ್ರೀ ಸೀನಪ್ಪ | ಅಧ್ಯಕ್ಷರು 1ನೇ ಬ್ಲಾಕ್, ಆನಂದನಗರ ಕ್ಷೇಮಾಭಿವೃದ್ದಿ ಸಂಘ (ರಿ) | ಹಾಜರಿದ್ದರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಗೋಪಾಲ್ ನಾಯಕ್, ಮುಖ್ಯ ಅಭಿಯಂತರರು, ಮತ್ತು ಕಾರ್ಯದರ್ಶಿಗಳಾದ ಶ್ರೀ ಮುಕೇಶ್ ಎಸ್ ಬಿರಾದಾರ್, ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್

ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರನ್ನು & ಸಾರ್ವಜನಿಕರನ್ನು ನೋಡಲ್ ಅಧಿಕಾರಿಯವರಿಂದ ಸ್ವಾಗತಿಸಲಾಯಿತು. ಮತ್ತು ಚರ್ಚಿಸಲು ಪ್ರಾರಂಭಿಸಲಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಹಿಂದಿನ ಸಭೆಯ ನಡವಳಿಗಳನ್ನು ತಯಾರಿಸಿ ಸಭೆಗೆ ನೀಡುವುದು.
2. ಸಭೆ ನಡೆಯುವ ದಿನಾಂಕದ ನೋಟೀಸ್ ಗಳನ್ನು 10 ದಿವಸಗಳ ಮುಂಚಿತವಾಗಿ ನೀಡುವುದು.
3. ಸಭೆಯನ್ನು 1ನೇ ಮತ್ತು 3ನೇ ಶನಿವಾರದಂದು ನಡೆಸುವುದು.
4. ನಡವಳಿಗಳನ್ನು ಆನ್ ಲೈನ್‌ನಲ್ಲಿ ಸಿಗುವಂತೆ ಕ್ರಮ ವಹಿಸುವುದು.
5. ಹಿಂದಿನ ಸಭೆಯಲ್ಲಿ ಚಚಿಸಿದಂತೆ, ಪೋಲಿಸ್ ಇಲಾಖೆಯವರಿಗೆ ಕ್ರಮ ವಹಿಸಲು ಸೂಚಿಸಿದ ಕ್ರಮದ ಬಗ್ಗೆ ತುರ್ತಾಗಿ ಸಮಸ್ಯೆ ನಿವಾರಿಸಿರುತ್ತಾರೆಂದು ತಿಳಿಸಿಲಾಯಿತು.
6. ಬಿ.ಡಬ್ಲ್ಯೂ.ಎಸ್.ಎಸ್.ಬಿ ನೀರಿನ ತೊಂದರೆ ಇದೆಯೆಂದು 5ನೇ ಅಡ್ಡರಸ್ತೆ, ಆನಂದ ನಗರ 1ನೇ ಹಂತಗಳಲ್ಲಿ ನೀರಿನ ಸಮಸೆ ಇದೆಯೆಂದು ಸಭೆಯಲ್ಲಿ ಚರ್ಚಿಸಿದ್ದು, 5ನೇ ತಾರೀಖಿನೊಳಗೆ ಸಮಸ್ಯೆ ಬಗೆ ಹರಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಳು ತಿಳಿಸಿರುತ್ತಾರೆ.
7. ರಸ್ತೆ ಹಂಪ್ ಮತ್ತು ಸೈನ್ ಬೋರ್ಡ್‌ಗಳನ್ನು ಅಳವಡಿಸುವುದು.
8. ರಸ್ತೆಯಲ್ಲಿ ಬಿದ್ದಿರುವ ಹಾಗೂ ಅನಧೀಕೃತವಾಗಿ ನೇತು ಹಾಕಿರುವ ಓ.ಎಫ್.ಸಿ ಕೇಬಲ್‌ಗಳನ್ನು ಸರಿಪಡಿಸಲು ಸೂಚಿಸಲಾಯಿತು.
9. 80 ಅಡಿ ರಸ್ತೆಯ ಕಡೆಯ ಮನೆಗೆ ರಾಜಕಾಲುವೆಯ ನೀರು ನುಗ್ಗುತ್ತಿದ್ದು, ನೀರು ಹರಿಯದಂತೆ ಕ್ರಮ ವಹಿಸಲು ಕೋರಿದ್ದು, ಸಭೆಯಲ್ಲಿ ಕೋರಿರುವಂತೆ ಕ್ರಮ ವಹಿಸಲು ಸೂಚಿಸಲಾಯಿತು.
10. ಬರ್ಲಆರಿ ಸರ್ವೀಸ್ ರಸ್ತೆಯಲ್ಲಿ ಬೋರ್ಡ್ ಅನ್ನು ಹಾಕುವ ಬಗ್ಗೆ ಚರ್ಚಿಸಲಾಯಿತು.
11. 6ನೇ ಅಡ್ಡರಸ್ತೆ–ಹೆಬ್ಬಳದಲ್ಲಿ ಕಸವನ್ನು ತೆರವುಗೊಳಿಸುವ ಬಗ್ಗೆ ಚರ್ಚಿಸಲಾಯಿತು.
12. ಡ್ರೈನ್ ಬ್ಲಾಕ್ ಆಗಿರುವ ಬಗ್ಗೆ: ಡ್ರೇನ್ ಇಲ್ಲದೇ ಇರುವುದರಿಂದ ನೀರು ಸರಾಗವಾಗಿ ಹರಿಯದೇ ಇರುವುದರಿಂದ ಶ್ರೀನಿವಾಸ್ ರವರು ಕ್ರಮ ವಹಿಸುವುದು.
13. ಎಂ.ಎಸ್.ಎಸ್ ಲೇಔಟ್ 2ನೇ ಸ್ಟೇಜ್, 2ನೇ ಅಡ್ಡರಸ್ತೆಗಳಲಿ ಪೈಪ್ ಗಳನ್ನು ಅಳವಡಿಸುವುದು.
    - ಜಲ್ಲಿ ಹಾಕಿರುತ್ತಾರೆ.ಡಾಂಬರೀಕರಣ ಮಾಡದೇ ಇರುವುದರಿಂದ ಹಿರಿಯ ನಾಗರೀಕರಿಗೆ ನಡೆದಾಡಲು ತೊಂದರೆ ಆಗಿರುವುದನ್ನು ಸರಿಪಡಿಸಲು ಕೋರಿರುವ ಬಗ್ಗೆ ಕ್ರಮ ವಹಿಸುವುದು.
    - 5ನೇ ಅಡ್ಡರಸ್ತೆ ಜಿ.ಎಸ್.ಬಿ ಹಾಕಿದೆ. ಆನಂದ್ ನಗರ 10 ಬ್ಲಾಕ್ ಡಾಂಬರೀಕರಣ ಮಾಡದೇ ಇರುವುದು ಹಾಗೂ ಡ್ರೈನೇಜ್ ಸಮಸ್ಯೆಯ ಬಗ್ಗೆ ಚರ್ಚಿಸಲಾಗಿ. ಈ ಎಲ್ಲಾ
    - ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಭಿಯಂತರರು ಸೂಕ್ತ ಕ್ರಮ ವಹಿಸಿ, ಸಮಸ್ಯೆಗಳನ್ನು ನಿವಾರಿಸುವಂತೆ ಸೂಚಿಸಲಯಿತು.
14. ಹೆಬ್ಬಾಳ ವಾರ್ಡ್‌ಗಳಲಿ ಬೀದಿ ದೀಪಗಳನ್ನು ಅಲವಡಿಸುವ ಮತ್ತು ಸಮಸ್ಯೆಗಳ ಬಗ್ಗೆ ವಿದ್ಯುತ್ ಇಲಾಖೆಗೆ ತಿಇಳಿಸುವುದಾಗಿ,ಸಭೆಯಲ್ಲಿ ತಿಳಿಸಿದರು.

15. ಏರ್ ಕಾಂಪ್ರೆಸಸರ್ ಉಪಯೋಗಿಸಿ ಚರಂಡಿಯನ್ನು ಸ್ವಚ್ಛಗೊಳಿಸುವ ಬಗ್ಗೆ ಚರ್ಚಿಸಲಾಯಿತು.
16. ಆಟದ ಮೈದಾನ, ಬೀದಿ ದೀಪಗಳನ್ನು ಸರಿಪಡಿಇಸುವ ಬಗ್ಗೆ ಚರ್ಚಿಸಲಾಯಿತು.
17. ಮುಂದಿನ ಸಭೆಯನ್ನು ದಿನಾಂಕ: 05.03.2022 ರಂದು ನಡೆಸಲಾಗುವುದೆಂದು ತಿಳಿಸಲಾಯಿತು.

**ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**ಸಹಾಯಕ ಅಭಿಯಂತರರು**
**ಹಾಗೂ ಕಾರ್ಯದರ್ಶಿಗಳು ವಾರ್ಡ್ 21**

9/3
**ಮುಖ್ಯ ಅಭಿಯಂತರರು (ದಾಸರಹಳ್ಳಿ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:**

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಪ್ರಧಾನ ಅಭಿಯಂತರರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ) ರವರಿಗೆ ಕಳುಹಿಸುತ್ತಾ, ನಡುವಳಿಯಲ್ಲಿ ವಿವರಿಸಲಾದ ಎಲ್ಲಾ ಅಂಶಗಳನ್ನು ಪಾಲಿಸಲು ಸೂಚಿಸಿದೆ.
4. ಸಹಾಯಕ ಅಭಿಯಂತರರು (ಹೆಬ್ಬಾಳ) ರವರಿಗೆ ಕಳುಹಿಸುತ್ತಾ, ನಡುವಳಿಯಲ್ಲಿ ವಿವರಿಸಲಾದ ಎಲ್ಲಾ ಅಂಶಗಳನ್ನು ಪಾಲಿಸಲು ಸೂಚಿಸಿದೆ.
5. ಕಛೇರಿ ಕಡತಕ್ಕೆ.